ವಚನಕಾರರ ಪ್ರಮಾಣ ಮೀಮಾಂಸೆ

ಮಲ್ಲಪ್ಪ ಎನ್. ಬಂಡಿ*

DOI: https://doi.org/10.5281/zenodo.23890493

ABSTRACT

ವಚನಕಾರರ ಜ್ಞಾನಮೀಮಾಂಸೆಯು ಭಾರತೀಯ ದಾರ್ಶನಿಕ ಪರಂಪರೆಗಳ ಸಾಂಪ್ರದಾಯಿಕ ಜ್ಞಾನಮಾರ್ಗಗಳಿಗಿಂತ ತೀರಾ ಭಿನ್ನವಾದ ಹಾಗೂ ವಿಶಿಷ್ಟವಾದ ನೆಲೆಯನ್ನು ಹೊಂದಿದೆ. ಪ್ರತ್ಯಕ್ಷ, ಅನುಮಾನ, ಶಬ್ದ ಮತ್ತು ಉಪಮಾನ ಪ್ರಮಾಣಗಳನ್ನು ವಚನಕಾರರು ಜಡ ಹಾಗೂ ಸ್ಥಿರ ಸಾಧನಗಳೆಂದು ತಿರಸ್ಕರಿಸಿದ್ದಾರೆ. ಭಾಷೆಯ ಮಿತಿಗಳು ಹಾಗೂ ವೇದ, ಶಾಸ್ತ್ರ, ಪುರಾಣಗಳಂತಹ ಶಬ್ದಪ್ರಮಾಣಗಳು ಕಾಲಾನಂತರದಲ್ಲಿ ಸಾಮಾಜಿಕ ಅಸಮಾನತೆಯನ್ನು ಪೋಷಿಸಿದ ಕಾರಣಕ್ಕೆ ಅವುಗಳನ್ನು ಕಟುವಾಗಿ ನಿರಾಕರಿಸಲಾಗಿದೆ. ಬದಲಾಗಿ, ನಿರಂತರ ಚಲನಶೀಲವಾದ 'ಅನುಭಾವ'ವನ್ನೇ ಅವರು ಪರಮ ಪ್ರಮಾಣವೆಂದು ಒಪ್ಪುತ್ತಾರೆ. ಇಂದ್ರಿಯಗಳ ಮಿತಿಯನ್ನು ಅರಿತಿದ್ದ ಅವರು, ಹಳೆಯ ಪ್ರಮಾಣಗಳನ್ನು ಕೆಡವುತ್ತಾ ಷಟ್ಸ್ಥಲ, ಅಷ್ಟಾವರಣಗಳಂತಹ ಹೊಸ ಚಲನಶೀಲ ಪ್ರಮಾಣಗಳನ್ನು ಸೃಷ್ಟಿಸಿದರು. ಹೀಗೆ ರಚನೆ ಮತ್ತು ನಿರಚನೆಯ ಪ್ರಕ್ರಿಯೆಯ ಮೂಲಕ ಲೋಕವನ್ನು ಗ್ರಹಿಸಿದರೂ, ಅಂತಿಮವಾಗಿ ಪರಶಿವ ಅಥವಾ ಪರತತ್ವವನ್ನು 'ಅಪ್ರಮಾಣ', 'ಅಗಮ್ಯ' ಹಾಗೂ 'ಅಗೋಚರ' ಎಂದೇ ದಾರ್ಶನಿಕವಾಗಿ ಪ್ರತಿಪಾದಿಸಿದ್ದಾರೆ. ಇದು ವಚನಕಾರರ ತರ್ಕಾತೀತವಾದ ಹಾಗೂ ಅನುಭಾವಿಕವಾದ ನಿಲುವನ್ನು ಎತ್ತಿಹಿಡಿಯುತ್ತದೆ.

KEYWORDS: ವಚನಕಾರರು, ಪ್ರಮಾಣ ಮೀಮಾಂಸೆ, ಜ್ಞಾನಮೀಮಾಂಸೆ, ಅನುಭಾವ, ಅಪ್ರಮಾಣ.

* **ಡಾ. ಮಲ್ಲಪ್ಪ ಎನ್. ಬಂಡಿ,** ಸಹಾಯಕ ಪ್ರಾಧ್ಯಾಪಕರು, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಮಾಣ ಎಂದರೇನು? ಅದರಿಂದ ಜ್ಞಾನವನ್ನು ವಿವರಿಸಿಕೊಳ್ಳುವಲ್ಲಿ ಆಗುವ ಲಾಭ ನಷ್ಟಗಳೇನು, ಜೀವನಧರ್ಮವನ್ನು ನಿರ್ವಹಿಸಿಕೊಳ್ಳುವಲ್ಲಿ ಅವುಗಳ ಪಾತ್ರವೇನು? ಪ್ರಮಾಣಗಳನ್ನು ಕುರಿತು ವಚನಕಾರರು ತಳೆದಿದ್ದ ನಿಲುವುಗಳ ಸ್ವರೂಪವನ್ನು ಈ ಅಧ್ಯಾಯದಲ್ಲಿ ವಿವೇಚನೆಗೊಳಪಡಿಸಲಾಗುವುದು.

ಜ್ಞಾನಮೀಮಾಂಸೆ ಎನ್ನುವುದು ಅರಿವು ಮತ್ತು ಇರಿವಿನ ಸ್ವರೂಪವನ್ನು ಕುರಿತ ವಿವೇಚನೆ. ಈ ವಿವೇಚನೆಯ ಮೂಲಕ ನಮ್ಮ ಎದುರಿಗಿನ ವಸ್ತು ಪ್ರಪಂಚವನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಈ ಬಗೆಯ ತಿಳುವಳಿಕೆಯನ್ನೇ ನಾವು ಜ್ಞಾನ ಎಂದು ಕರೆಯುತ್ತೇವೆ. ಭಾರತೀಯ ದಾರ್ಶನಿಕ ಪರಂಪರೆಗಳಲ್ಲಿ ಜ್ಞಾನವನ್ನು ಪಡೆಯಲು ಇರುವ ಮಾಧ್ಯಮಗಳನ್ನು ಪ್ರಮಾಣಗಳು ಎಂದು ಕರೆಯಲಾಗಿದೆ. ಸರಿಯಾದ ಪ್ರಮಾಣಗಳಿಂದ ಸರಿಯಾದ ಜ್ಞಾನವನ್ನು ಪಡೆಯಲು ಸಾಧ್ಯ. ಪ್ರಮಾಣಗಳು ತಪ್ಪಾಗಿದ್ದರೆ ಪಡೆದ ಜ್ಞಾನವು ತಪ್ಪಾಗಿ ಇರುತ್ತದೆ ಎಂಬ ಗ್ರಹಿಕೆಯನ್ನು ಅನೇಕ ದಾರ್ಶನಿಕ ಪಂಥಗಳು ಪ್ರತಿಪಾದಿಸಿವೆ. ಯಥಾರ್ಥ ಜ್ಞಾನವನ್ನು ಪಡೆಯಲು ಬಳಸಲಾದ ಸಾಧನವೇ ಪ್ರಮಾಣ. ಅವುಗಳ ಮೂಲಕ ವಸ್ತುಸ್ವಭಾವ ಅಥವಾ ಸತ್ಯವನ್ನು ತಿಳಿಯಲು ಸಾಧ್ಯ ಎಂಬ ಪ್ರತಿಪಾದನೆಯನ್ನು ಅನೇಕ ದಾರ್ಶನಿಕ ಪಂಥಗಳು ಮಂಡಿಸಿವೆ. ಪ್ರಮಾತ, ಪ್ರಮಾಣ, ಪ್ರಮೇಯ ಎಂಬ ತ್ರಿಪುಟಿಗಳಿಂದ ಜ್ಞಾನವು ರೂಪಿತವಾಗುತ್ತದೆ. ಪ್ರಮಾತ ಎಂದರೆ ತಿಳಿಯುವವನು, ಪ್ರಮಾಣ ಎಂದರೆ ತಿಳಿಯುವುದಕ್ಕೆ ಬಳಸುವ ಮಾಧ್ಯಮ, ಪ್ರಮೇಯವೆಂದರೆ ತಿಳಿಯಲ್ಪಡುವ ವಸ್ತು. ಈ ಮೂರರ ಸಂಯೋಗದಿಂದ ತಿಳಿವು ಮೂಡುತ್ತದೆ. ಇದನ್ನು ಪ್ರಮೆ(ಜ್ಞಾನ) ಎಂದು ಕರೆಯಲಾಗಿದೆ. ಇವುಗಳಲ್ಲಿ ಯಾವುದೋ ಒಂದರಲ್ಲಿ ದೋಷ ಉಂಟಾದರೂ ನಿಜವಾದ ಜ್ಞಾನ ಲಭಿಸಲಾಗದು. ಈ ನೆಲೆಯ ತಾತ್ವಿಕ ಚರ್ಚೆ ಭಾರತದ ಎಲ್ಲಾ ಆಸ್ತಿಕ ದರ್ಶನ ಪರಂಪರೆಗಳಲ್ಲಿ ಕಂಡುಬರುತ್ತದೆ. ಆದರೆ ನಾಸ್ತಿಕ ದಾರ್ಶನಿಕ ಪರಂಪರೆಗಳು ಪ್ರಮಾಣಗಳ ಹಂಗು ಹರಿದುಕೊಂಡು ಲೋಕವಸ್ತುವಿನ ಸ್ವಭಾವ ಮತ್ತು ಸತ್ಯದರ್ಶನವನ್ನು ಅರಿಯಲು ತೊಡಗುತ್ತವೆ.

ಪ್ರಮಾಣಗಳನ್ನು ಒಪ್ಪುವ ನಿರಾಕರಿಸುವ ಎಲ್ಲಾ ದಾರ್ಶನಿಕ ಪಂಥಗಳು ಈ ಮೂರು ಬಗೆಯ ಪ್ರಮಾಣಗಳ ಬಗ್ಗೆ ಮಾತನಾಡಿವೆ. 1. ಪ್ರತ್ಯಕ್ಷ ಪ್ರಮಾಣ: ಅಂದರೆ ಇಂದ್ರಿಯಗಳ ಮೂಲಕ ಗಮ್ಯವಾದದ್ದು ಪ್ರತ್ಯಕ್ಷ ಪ್ರಮಾಣ. 2. ಅನುಮಾನ ಪ್ರಮಾಣ: ಅಂದರೆ ತರ್ಕದ ಮೂಲಕ ಸಾಧಿತವಾದದ್ದು ಅನುಮಾನ ಪ್ರಮಾಣ. 3. ಶಬ್ದ ಪ್ರಮಾಣ: ಈಗಾಗಲೆ ಇರುವ ಅಥವಾ ಹಿಂದಿನ ಕಾಲದಿಂದಲೂ ಸಾಗಿ ಬಂದಿರುವ ಎಲ್ಲಾ ಬಗೆಯ ಸ್ಥಾಪಿತ ಜ್ಞಾನ. ಇವಲ್ಲದೆ ಅಷ್ಟು ಮುಖ್ಯವಲ್ಲದ ಉಪಮಾನ, ಅರ್ಥಾಪತ್ತಿ, ಅನುಪಲಬ್ಧ ಎಂಬ ಪ್ರಮಾಣಗಳ ಚರ್ಚೆ ಆನುಷಂಗಿಕವಾಗಿ ಬಂದಿದೆ. ''ಮೊದಲು ನೋಡಿದ ವಸ್ತುವಿಗೆ ಸದೃಶವಾದ ಬೇರೊಂದು ವಸ್ತುವನ್ನು ನೋಡಿದಾಗ ನೆನಪಾದ ವಸ್ತುವಿನ ಸಾದೃಶಜ್ಞಾನ ಉಂಟಾದರೆ''[1] ಉಪಮಾನವೆಂದು, ತಿಳಿದುದರಿಂದ ತಿಳಿಯದೇ ಇರುವುದನ್ನು ತಿಳಿಯುವಂತಾದರೆ ಅರ್ಥಾಪತ್ತಿಯೆಂದೂ, ಅಭಾವ ಜ್ಞಾನವನ್ನು ಅನುಪಲಬ್ಧಿ ಎಂದು ಕರೆಯಲಾಗಿದೆ.

ಚಾರ್ವಾಕರು ಪ್ರತ್ಯಕ್ಷ ಪ್ರಮಾಣವನ್ನು ಮಾತ್ರ ಒಪ್ಪುತ್ತಾರೆ. ಸಾಂಖ್ಯರು ಪ್ರತ್ಯಕ್ಷ ಮತ್ತು ಶಬ್ದಪ್ರಮಾಣಗಳನ್ನು ಮಾತ್ರ ಮಾನ್ಯ ಮಾಡುತ್ತಾರೆ. ನ್ಯಾಯ ಪಂಥದವರು ಪ್ರತ್ಯಕ್ಷ, ಶಬ್ದ, ಉಪಮಾನ ಪ್ರಮಾಣಗಳನ್ನು ಒಪ್ಪುತ್ತಾರೆ. ವೇದಾಂತಿಗಳು ಮೇಲಿನ ಎಲ್ಲಾ ಪ್ರಮಾಣಗಳನ್ನು ಜ್ಞಾನ ಸಂಪಾದನೆಯ ಮಾರ್ಗದಲ್ಲಿ ಬಳಸಿಕೊಳ್ಳುತ್ತಾರೆ. ಬೌದ್ಧ ಯೋಗಾಚಾರ ಪಂಥದವರು ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳನ್ನು ಒಪ್ಪಿದರೆ, ಮಾಧ್ಯಮಿಕರು ಎಲ್ಲಾ ಬಗೆಯ ಪ್ರಮಾಣಗಳನ್ನು ನಿರಾಕರಿಸುತ್ತಾರೆ. ''ಪ್ರಮಾಣಗಳು ಇಲ್ಲ, ಅವುಗಳಿಂದ ಗಮ್ಯವಾದುದೂ ಇಲ್ಲ''[2] ಎಂಬುದು ನಾಗಾರ್ಜುನನ ನಿಲುವು. ''ಪ್ರಪಂಚದ ಎಲ್ಲ ವಸ್ತುಗಳು ಪ್ರಮಾಣಗಳಿಂದ ಸಿದ್ಧಿಸುತ್ತವೆ''[3](ಅದೇ.) ಎಂಬುದು ವೇದಾಂತಿಗಳ ನಿಲುವು. ಅಳತೆ ಎಂಬ ಸಾಧನ ಇರುವುದಾದರೆ ಅಳೆಯಿಸಿಕೊಳ್ಳುವ ವಸ್ತುವೊಂದು ಇರಲೇಬೇಕು, ಆದ್ದರಿಂದ ಪ್ರಮಾಣಗಳಿಂದ ಪ್ರಮೇಯಗಳು ಸಿದ್ಧಿಸುತ್ತವೆ ಎಂಬುದು ಅವರ ತರ್ಕ. ಬೌದ್ಧ ಮಾಧ್ಯಮಿಕಕಾರನಾದ ನಾಗಾರ್ಜುನ ಈ ತರ್ಕವನ್ನು ಒಪ್ಪುವುದಿಲ್ಲ. ''ಪ್ರಮಾಣ ಪ್ರಮೇಯಗಳು ಸ್ವತಂತ್ರವಾಗಿ ಉಂಟಾದವುಗಳಲ್ಲ''[4] ಎನ್ನುತ್ತಾನೆ. ಏಕೆಂದರೆ ಅವುಗಳಿಗೆ ಸ್ವತಂತ್ರ ಅಸ್ತಿತ್ವ ಇಲ್ಲ, ಅಂದರೆ ಅಳೆಯಿಸಿಕೊಳ್ಳುವ ವಸ್ತು ಮತ್ತು ಅಳತೆಯ ಸಾಧನಗಳೆರಡು ಪರಸ್ಪರ ಅವಲಂಬಿತವಾಗಿವೆ. ಅಳೆಯಿಸಿಕೊಳ್ಳುವ ವಸ್ತುವನ್ನಾಧರಿಸಿ ಅಳತೆಯ ಸಾಧನ ಸಿದ್ಧವಾಯ್ತೋ? ಅಥವಾ ಅಳತೆಯ ಸಾಧನವನ್ನು ಆಧರಿಸಿ ಅಳೆಯಿಸಿಕೊಳ್ಳುವ ವಸ್ತು ಸಿದ್ಧವಾಯ್ತೋ? ಎಂಬ ಎರಡನ್ನೂ ಒಪ್ಪಲಾಗದು. ಹೀಗೆ ಪ್ರಮಾಣಗಳ ಚರ್ಚೆ ಜ್ಞಾನಮೀಮಾಂಸೆಯನ್ನು ಸತ್ಯದರ್ಶನದ ದಾರಿಯನ್ನು ಹರಿತಗೊಳಿಸಿತು. ಈ ದಾರಿಗೆ ವಚನಕಾರರು ತೋರಿದ ಪ್ರತಿಕ್ರಿಯೆಗಳು, ತಳೆದ ನಿಲುವುಗಳು ಮೌಲಿಕವಾದವುಗಳಾಗಿವೆ.

ವಚನಕಾರರು ಎಲ್ಲ ಬಗೆಯ ಪ್ರಮಾಣಗಳನ್ನು ನಿರಾಕರಿಸುತ್ತಾರೆ ಅಂತ ಒಮ್ಮೆ ಅನ್ನಿಸಿದರೆ, ಇಲ್ಲ, ಅವರು ಸ್ಥಾಪಿತ ಪ್ರಮಾಣಗಳನ್ನು ಮಾತ್ರ ನಿರಾಕರಿಸುತ್ತಿದ್ದಾರೆ ಅಂತ ಒಮ್ಮೆ ಅನ್ನಿಸುತ್ತದೆ. ಅವುಗಳ ಜಾಗದಲ್ಲಿ ಹೊಸ ಬಗೆಯ ಪ್ರಮಾಣಗಳನ್ನು ಮಂಡಿಸುತ್ತಿದ್ದಾರೆ ಅಂತ ಒಮ್ಮೆ ಅನ್ನಿಸುತ್ತದೆ. ನಿಶ್ಚಿತವಾಗಿ ಹೇಳಬಹುದಾದ ಒಂದು ಸಂಗತಿ ಎಂದರೆ ಲೋಕವಸ್ತುವನ್ನು ಕುರಿತು ಅವರು ಮುಂದಿಡುವ ಪ್ರಮಾಣಗಳು ಜಡವಾದವುಗಳಲ್ಲ, ಸ್ಥಿರವಾದವುಗಳಲ್ಲ; ಅವು ಜಂಗಮ ಸ್ವರೂಪಿಯಾದವುಗಳು. ಅವುಗಳ ಆಹ್ವಾನ ಮತ್ತು ವಿಸರ್ಜನ ನಿರಂತರವಾಗಿ ಸಂಭವಿಸುವ ವಿದ್ಯಮಾನವಾಗಿರುತ್ತದೆ. ಆದ್ದರಿಂದ ವಚನಕಾರರ ಪ್ರಮಾಣ ಭಂಜನ ಮತ್ತು ನಿರ್ಮಾಣ ಒಂದರ್ಥದಲ್ಲಿ ಸಾಪೇಕ್ಷ ಚಟುವಟಿಕೆಯಾಗಿ ಕಾಣಿಸುತ್ತದೆ. ಲೋಕವನ್ನು ಗ್ರಹಿಸುವುದಕ್ಕೆ ಪ್ರಮಾಣಗಳು ಬೇಕು ಅಥವಾ ಬೇಡ ಎಂಬ ತಿಳುವಳಿಕೆ ಅನುಭವದ ಎಲ್ಲ ಮಟ್ಟಗಳಲ್ಲಿ ಒಂದೇ ಆಗಿರುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಅವರ ನಿಲುವು.

ಪ್ರಮಾಣಗಳು ಲೋಕವನ್ನು ಗ್ರಹಿಸುವುದಕ್ಕೆ, ವಿವರಿಸಿಕೊಳ್ಳುವುದಕ್ಕೆ ಇರುವ ಸಾಧನಗಳೆಂಬ ನಿಲುವನ್ನು ವಚನಕಾರರು ಮಾನ್ಯ ಮಾಡುವುದಿಲ್ಲ. ಏಕೆಂದರೆ ಅವರಿಗೆ ಅನುಭವವೇ ಪ್ರಮಾಣ. ಆದರೆ ಆ ಅನುಭವವೂ ಕೂಡ ಇಂದ್ರಿಯಗಮ್ಯವಾದ

ಕಾರಣ ಅದಕ್ಕೂ ಮಿತಿಗಳಿರುವುದನ್ನು ಅವರು ಅರಿಯದವರೇನಲ್ಲ. ಲೋಕಾನುಸಂಧಾನ ಜರುಗುವುದೇ ದೇಹದ ಮೂಲಕ. ದೇಹದಿಂದ ಒದಗಿ ಬರುವ ಅನಿವಾರ್ಯ ಮಿತಿಗಳನ್ನು ನಿವಾರಿಸಿಕೊಳ್ಳುವುದು ಒಂದು ಸವಾಲು. ಇಂದ್ರಿಯಗಳು ಲೋಕಗ್ರಹಿಕೆಗೆ ಸಹಾಯ ಮಾಡುವ ಸಾಧನಗಳಾಗಿರುವಂತೆ ತಡೆಯನ್ನೂ ಒಡ್ಡುವ ಉಪಕರಣಗಳೂ ಹೌದು. ಇನ್ನು ಮನಸ್ಸಿನ ಮಾತು, ಹಿಂದಿನಿಂದ ಬಂದ ಎಲ್ಲಾ ಅನುಭವಗಳನ್ನು ಸಂಗ್ರಹಿಸಿಕೊಂಡು ಚಿತ್ತವು ಮುಂದಿನ ಎಲ್ಲಾ ಅನುಭವಗಳನ್ನು ಅದರ ಮೂಲಕವೇ ಸ್ವೀಕರಿಸಿ ವ್ಯಾಖ್ಯಾನಿಸುತ್ತದೆ. ಮನಸ್ಸಿನಲ್ಲಿ ಸಂಚಿತಗೊಂಡ ಸುಖ ದುಃಖದ ಅನುಭವಗಳು ನಮ್ಮ ಇಷ್ಟ ಅನಿಷ್ಟಗಳನ್ನು ನಿರ್ಧರಿಸಿ ಮುಂದಿನ ನಮ್ಮ ಲೋಕದೃಷ್ಟಿಯನ್ನು ಪ್ರಭಾವಿಸುತ್ತವೆ. ಈ ಬಗೆಯ ಅನುಸಂಧಾನವು ಪೂರ್ವಾಗ್ರಹಪೀಡಿತವಾಗಿರಲೇಬೇಕು. ಇದರಿಂದ ಮುಕ್ತವಾಗುವುದು ದೇಹ ಒಡ್ಡುವ ಮೊದಲ ಸಂಕಷ್ಟ. ಈ ಸಂಕಷ್ಟದ ಬಗ್ಗೆ ಅನೇಕ ವಚನಕಾರರು ಮಾತನಾಡುತ್ತಾರೆ.

ಕೈ ಮುಟ್ಟುವಲ್ಲಿ, ಕಿವಿ ಕೇಳುವಲ್ಲಿ, ಬಾಯಿ ಕೊಂಬಲ್ಲಿ,
ಮೂಗು ವಾಸಿಸುವಲ್ಲಿ, ಕಣ್ಣು ನೋಡುವಲ್ಲಿ–
ಇಂತೀ ಐಯಿದರ ಗುಣ ಎಡೆಯಾಟ
ಅದಾರಿಂದ ಎಂಬುದ ತಾ ವಿಚಾರಿಸಿದಲ್ಲಿ,
ಪಂಚಕ್ರೀಯಲ್ಲಿ ಸಂಚಿತ ಪ್ರಾರಬ್ಧ ಆಗಾಮಿಯೆಂಬ
ಹಿಂಚುಮುಂಚಿಗೆ ಸಿಕ್ಕದೆ, ಕುಡಿಬೆಳಗಿನ ಮಿಂಚಿನ
ಸಂಚದಂತಿರಬೇಕೆಂದನಂಬಿಗರ ಚೌಡಯ್ಯ[5]

ಅಂಬಿಗರ ಚೌಡಯ್ಯ

ರೂಪಿಂಗೆ ಕೇಡುಂಟು ನಿರೂಪಿಂಗೆ ಕೇಡಿಲ್ಲ.
ರೂಪು ನಿರೂಪನೊಡಗೂಡುವ ಪರಿ ಎಂತು ಹೇಳಾ?
ಅಸಂಬಂಧ ಸಂಬಂಧವಾಗಿ ಇದೆ.
ದೇಹ ಇಂದ್ರಿಯವೆಂಬ ಜಾತಿಸೂತಕವಿರಲು
ಗುಹೇಶ್ವರಲಿಂಗವ ಮುಟ್ಟಬಾರದು ಕೇಳವ್ವಾ.[6]

ಅಲ್ಲಮ ಪ್ರಭು

ಹೀಗೆ ಇಂದ್ರಿಯಗಳ ಮೂಲಕ ಸಂವೇದ್ಯವಾಗುವ ಪ್ರತ್ಯಕ್ಷ ಪ್ರಮಾಣಗಳನ್ನು ಅವರು ಎಂಜಲು, ಸೂತಕ ಎಂದೇ ಪರಿಭಾವಿಸುತ್ತಾರೆ. ಲೋಕಾನುಸಂಧಾನದ ಸಂದರ್ಭದಲ್ಲಿ ಒಂದು ಹಂತದವರೆಗೆ ಅವುಗಳ ಸಹಾಯ ಬೇಕು, ಆತ್ಯಂತಿಕ ಮಟ್ಟ ತಲುಪಿದ ಮೇಲೆ ಅವುಗಳಿಂದ ಏನು ಪ್ರಯೋಜನವಿಲ್ಲ ಎನ್ನುತ್ತಾರೆ.

ಜ್ಞಾತೃವೇ ಅರುಹಿಸುವುದು, ಜ್ಞಾನವೇ ಅರಿವುದು,
ಜ್ಞೇಯವೇ ನಿಶ್ಚಯಿಸುವುದು– ಈ ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿವಿಧಸಾಧನದಿಂದ
ಲಿಂಗವನರಸಿ ಲಿಂಗವನರಿದು ಲಿಂಗವ ಬೆರಸಿ ಲಿಂಗವಾದ ಮತ್ತೆ,
ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿವಿಧಭ್ರಾಂತಿಸೂತಕ ಹೋಯಿತ್ತು,

ನಿಜವಾಯಿತ್ತು ಕಾಣಾ, ಗುಹೇಶ್ವರ.[7]

ಅಲ್ಲಮ ಪ್ರಭು

ಇಲ್ಲಿ ದಾರ್ಶನಿಕನಾದ ಅಲ್ಲಮ ಆಸ್ತಿಕ ದಾರ್ಶನಿಕ ಪರಂಪರೆಗಳು ಮಾನ್ಯ ಮಾಡಿದ ಜ್ಞಾನಮೀಮಾಂಸೆಯ ತ್ರಿಪುಟಿ ತತ್ವವನ್ನೇ ನಿರಾಕರಿಸಿಬಿಡುತ್ತಾನೆ. ಇನ್ನು ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮವೆಂಬ ಪಂಚೇಂದ್ರಿಯಗಳು ರೂಪ, ಶ್ರವಣ, ಗಂಧ, ರಸ, ಸ್ಪರ್ಶವೆಂಬ ಅನುಭವಕ್ಕೆ ಮಾಧ್ಯಮಗಳು. ಈ ಮಾಧ್ಯಮಗಳನ್ನು ಅಲ್ಲಮ ಎಂಜಲು ಎಂದು ಕರೆಯುತ್ತಾನೆ.

ಶಬ್ದವೆಂಬೆನೆ ಶ್ರೋತ್ರದೆಂಜಲು, 'ಸ್ಪರ್ಶ'ವೆಂಬೆನೆ ತ್ವಕ್ಕಿನೆಂಜಲು
ರೂಪೆಂಬೆನೆ ನೇತ್ರದೆಂಜಲು, ರುಚಿಯೆಂಬೆನೆ ಜಿಹ್ವೆಯೆಂಜಲು
ಪರಿಮಳವೆಂಬೆನೆ ಘ್ರಾಣದೆಂಜಲು, ನಾನೆಂಬೆನೆ ಅರಿವಿನೆಂಜಲು
ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರ ಲಿಂಗವು.[8]

ಅಲ್ಲಮ ಪ್ರಭು

ಇಂದ್ರಿಯಗಳ ಮೂಲಕ ಗ್ರಹಿಸಲ್ಪಟ್ಟ ಅನುಭವ ಎಂಜಲು ಅಲ್ಲದೆ ಬೇರೇನೂ ಅಲ್ಲ. ಏಕೆಂದರೆ ನಮ್ಮ ಇಂದ್ರಿಯಗಳು ನಮ್ಮ ಮನೋಕೋಶದಿಂದ ಕಟ್ಟಲ್ಪಟ್ಟವುಗಳಾಗಿರುತ್ತವೆ. ನಮ್ಮ ಮನೋಕೋಶದ ಮೂಲಕ ಹಾಯ್ದು ಬರುವ ಎಲ್ಲಾ ಅನುಭವಗಳು ಅದರ ಮಿತಿಗಳನ್ನು ದಾಟದೆ ನಿಲ್ಲುವ ಸಂದರ್ಭಗಳೇ ಹೆಚ್ಚು.

ಅನುಮಾನ ಪ್ರಮಾಣ: ಅನುಮಾನವೆಂದರೆ ತರ್ಕದ ಬಲದಿಂದ ಸಾಧಿತವಾಗುವ ಪ್ರಮಾಣ. ಮುಂಜಾನೆ ಎದ್ದು ಮನೆ ಅಂಗಳವೆಲ್ಲ ಒದ್ದೆ ಆಗಿರುವುದನ್ನು ನೋಡಿ ಹಿಂದಿನ ರಾತ್ರಿ ಮಳೆಯಾಗಿರಬೇಕು ಎಂದು ತಲುಪುವ ತೀರ್ಮಾನ. ಬೆಟ್ಟದ ಮೇಲೆ ಹೊಗೆಯಾಡುತ್ತಿರುವುದನ್ನು ನೋಡಿ ಬೆಂಕಿ ಹೊತ್ತಿಕೊಂಡಿರಬೇಕು ಎಂದು ತೀರ್ಮಾನಿಸುವುದು. ಇಂತಹ ಅನುಮಾನ ಪ್ರಮಾಣವನ್ನು ವಚನಕಾರರು ನಿರ್ವಹಿಸಿಕೊಳ್ಳುವ ನೆಲೆ ವಿಶಿಷ್ಟವಾದದ್ದು.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ,
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ,
ಕೂಡಲಸಂಗನ ಶರಣರ ಅನುಭಾವದ ಬಲದಿಂದ
ಎನ್ನ ಭವದ ಕೇಡು ನೋಡಯ್ಯಾ.[9]

ಬಸವಣ್ಣ

ಎಂಬ ವಚನದಲ್ಲಿ ತರ್ಕದ ಮಾದರಿಯೊಂದರ ನಿರೂಪಣೆಯಿದೆ. ಎರಡು ವೈರುಧ್ಯ ದ್ವಂದ್ವಗಳನ್ನು ಮುಂದಿಡುವ ವಚನ ಒಂದರ ಬಲದಿಂದ ಇನ್ನೊಂದರ ಕೇಡನ್ನು ಪರಿಗ್ರಹಿಸುವಂತೆ ಒತ್ತಾಯಿಸುತ್ತದೆ. ಅಂದರೆ ಜ್ಞಾನ, ಜ್ಯೋತಿ, ಸತ್ಯ, ಪರುಷ ಇವುಗಳ ಬಲದಿಂದ ಅಜ್ಞಾನ, ಕತ್ತಲೆ, ಅಸತ್ಯ, ಅವಲೋಹಗಳ ಕೇಡನ್ನು

ಪರಿಶೀಲಿಸುವಂತೆ ತಿಳಿಸುತ್ತದೆ.

ಜ್ಞಾನದ ಸಾನ್ನಿಧ್ಯದಲ್ಲಿ ಅಜ್ಞಾನ ಇರಲಾರದು, ಬೆಳಕಿನ ಸಾನ್ನಿಧ್ಯದಲ್ಲಿ ಕತ್ತಲೆ ಇರಲಾರದು, ಸತ್ಯದ ಸಾನ್ನಿಧ್ಯದಲ್ಲಿ ಅಸತ್ಯ ಇರಲಾರದು. ಹಾಗೆ ನೋಡಿದರೆ ಇಲ್ಲಿನ ಒಂದರ ಮೂಲಕ ಇನ್ನೊಂದನ್ನು ನೋಡುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಅಜ್ಞಾನ, ಕತ್ತಲೆ, ಅಸತ್ಯ, ಅವಲೋಹ ಇವು ಇಲ್ಲದೇ ಇರುವ ವಸ್ತುಗಳು. ಇಲ್ಲದೆ ಇರುವ ವಸ್ತುಗಳನ್ನು ಜ್ಞಾನ, ಜ್ಯೋತಿ, ಸತ್ಯ, ಪರುಷ ಎಂಬ ಇರುವ ವಸ್ತುಗಳ ಮೂಲಕ ಗ್ರಹಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ವಚನದ ಕೊನೆಗೆ ತರ್ಕಾತೀತವಾದ ನೆಲೆಯೊಂದು ಪ್ರಾಪ್ತವಾಗುತ್ತದೆ. ಅನುಭಾವದ ಬಲದಿಂದ ಭವದ ಕೇಡನ್ನು ನೋಡುವುದೇ ಆ ನೆಲೆ. ಈ ವಚನ ತರ್ಕದ ಸ್ಥಳದಲ್ಲಿ ಆರಂಭಗೊಂಡು ಕೊನೆಮುಟ್ಟುವುದು ತರ್ಕಾತೀತ ನೆಲೆಯಲ್ಲಿ. ಹೀಗಾಗಿ ಬಸವಣ್ಣನಂತಹ ವಚನಕಾರರು ತರ್ಕವನ್ನು ಒಂದು ಆರಂಭದ ಬಿಂದುವಾಗಿ ಗ್ರಹಿಸುತ್ತಾರಾದರೂ ಆತ್ಯಂತಿಕವಾಗಿ ನಿರಾಕರಿಸುತ್ತಾರೆ. ಈ ನೆಲೆಯಿಂದ ನೋಡಿದಾಗ ವಚನಕಾರರು ಅನುಮಾನ ಪ್ರಮಾಣವನ್ನು ಪ್ರಮಾಣವೆಂದು ನಿರಾಕರಿಸುತ್ತಾರೆ. ಅವರ ಮಟ್ಟಿಗೆ

ತರ್ಕವೆಂಬುದು ತಗರನ ಹೋರಟೆ.
ವೇದವೆಂಬುದು ಓದಿನ ಮಾತು;
ಶಾಸ್ತ್ರವೆಂಬುದು ಸಂತೆಯ ಸುದ್ದಿ.
ಪುರಾಣವೆಂಬುದು ಪುಂಡರ ಗೋಷ್ಠಿ,
ಭಕ್ತಿ ಎಂಬುದು ತೋರಿ ಉಂಬ ಲಾಭ.
ಗುಹೇಶ್ವರನೆಂಬುದು ಮೀರಿದ ಘನವು[10]

ಅಲ್ಲಮಪ್ರಭು

ಇಲ್ಲಿ ಅಲ್ಲಮಪ್ರಭು ವೇದ ಓದಿನ ಮಾತಾದಾಗ ಶಾಸ್ತ್ರ ಸಂತೆಯ ಸುದ್ದಿಯಾದಾಗ ಪುರಾಣವೆನ್ನುವುದು ಪುಂಡರ ಗೋಷ್ಠಿಯಾದಾಗ ತರ್ಕವೆನ್ನುವುದು ತಗರನ ಹೋರಟೆಯಾದಾಗ ಎಂದು ಹೇಳುವಾಗ ಎಲ್ಲಾ ಪ್ರಕ್ರಿಯೆಗಳಲ್ಲಿನ ಹಿಂದಿನ ತರ್ಕದ ಔಚಿತ್ಯವನ್ನೇ ಪ್ರಶ್ನಿಸುತ್ತಿದ್ದಾರೆ.

ಶಬ್ದ ಪ್ರಮಾಣ: ಮೊದಲೇ ತಿಳಿಸಿರುವಂತೆ ಶಬ್ದ ಪ್ರಮಾಣವೆಂದರೆ ಈಗಾಗಲೆ ಇರುವ ಅಥವಾ ಹಿಂದಿನ ಕಾಲದಿಂದಲೂ ಸಾಗಿ ಬಂದಿರುವ ಎಲ್ಲ ಬಗೆಯ ಸ್ಥಾಪಿತ ಜ್ಞಾನ. ಉಪಾಧ್ಯಾಯರು, ಋಷಿಗಳು, ಆಚಾರ್ಯರು, ಹಿರಿಯರು, ಮತಗ್ರಂಥಗಳು, ಪುಸ್ತಕಗಳು ಇವುಗಳ ಮೂಲಕ ಒದಗಿ ಬರುವ ಎಲ್ಲ ಬಗೆಯ ಪೂರ್ವಜ್ಞಾನ ಶಬ್ದಪ್ರಮಾಣವೆನಿಸಿಕೊಳ್ಳುತ್ತದೆ. ಹಿರಿಯರು ಹೇಳಿದ್ದಾರೆಯಾದಕಾರಣ ಅದು ನಿಜವಿರಲೇಬೇಕು, ಪವಿತ್ರ ಗ್ರಂಥದಲ್ಲಿ ಬರೆಯಲ್ಪಟ್ಟಿದೆಯಾದಕಾರಣ ಅದು ಸತ್ಯವಿರಲೇಬೇಕು ಎಂಬಂತಹ ತಿಳುವಳಿಕೆ ಶಬ್ದ ಪ್ರಮಾಣವೆನಿಸಿಕೊಳ್ಳುತ್ತದೆ. ಪರಂಪರೆಯಿಂದ ಪ್ರಶ್ನಿಸದೇ ಒಪ್ಪಿಕೊಂಡದ್ದನ್ನೆಲ್ಲಾ ಶಬ್ದ ಪ್ರಮಾಣವೆನ್ನಬಹುದು. ವಚನಕಾರರು ಎಲ್ಲ ಬಗೆಯ ಶಬ್ದ ಪ್ರಮಾಣಗಳನ್ನು ನಿರಾಕರಿಸುತ್ತಾರೆ. ಇದಕ್ಕೆ

ಕಾರಣಗಳು ಮುಖ್ಯವಾಗಿ ಎರಡು; ಮೊದಲನೆಯದು ಶಬ್ದ ಪ್ರಮಾಣದ ಆಧಾರವಾಹಿನಿ ಭಾಷೆಯಾಗಿರುವುದು. ಭಾಷೆಯೆಂಬುದು ವಾಸ್ತವದ ಪ್ರತಿಬಿಂಬವೇ ಹೊರತು ಲೋಕವಸ್ತುವಿನ ನಿಜವಾದ ವಿವರಣೆ ಅಲ್ಲ. ಆದ್ದರಿಂದ ಅಲ್ಲಮ ಭಾಷೆಯನ್ನು 'ಪ್ರಾಣಘಾತಕ' ಎಂದು ಕರೆಯುತ್ತಾನೆ.

ತಪವೆಂಬುದು ತಗಹು, ನೇಮವೆಂಬುದು ಬಂಧನ
ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣಘಾತಕ
ಇಂತೀ ಚತುರ್ವಿಧದೊಳಗಿಲ್ಲ, ಗುಹೇಶ್ವರ, ನಿಮ್ಮ ಶರಣರಗ್ರಗಣ್ಯರು![11]

ಅಲ್ಲಮಪ್ರಭು

ಎರಡನೆಯ ಕಾರಣವೆಂದರೆ ಶಬ್ದ ಪ್ರಮಾಣವು ಕಾಲಾನುಕಾಲದಿಂದ ಸಾಮಾಜಿಕ, ಧಾರ್ಮಿಕ, ಅಸಮಾನತೆಗಳನ್ನು ಪೋಷಿಸುತ್ತಾ ಬಂದಿರುವುದೇ ಆಗಿದೆ. ಹಿರಿಯರು ಹೇಳಿದ್ದಾರೆ, ಆಚಾರ್ಯರು ಹೇಳಿದ್ದಾರೆ, ಪವಿತ್ರ ಗ್ರಂಥಗಳಲ್ಲಿ ಹೇಳಲಾಗಿದೆ, ತಿಳಿದವರು ಹೇಳುತ್ತಾರೆ ಎನ್ನಲಾಗುವ ಎಲ್ಲ ಸಂಚಿತ ಸಂಗತಿಗಳನ್ನು ಅವಿಚಾರಿತವಾಗಿ ಒಪ್ಪಲಾಗದು ಎಂಬುದೇ ವಚನಕಾರರ ಮತವಾಗಿದೆ. ಅಂತಹ ವಚನಗಳ ಕೆಲವು ಮಾದರಿಗಳನ್ನು ಇಲ್ಲಿ ಗಮನಿಸಬಹುದು.

ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ.
ಇವ ಕುಟ್ಟಲೇಕೆ ಕುಸುಕಲೇಕೆ?
ಅತ್ತಲಿತ್ತ ಹರಿವ ಮನದ ಶಿರವನರಿದಡೆ ಬಚ್ಚಬರಿಯ ಬಯಲು
ಚೆನ್ನಮಲ್ಲಿಕಾರ್ಜುನಾ.[12]

ಅಕ್ಕಮಹಾದೇವಿ

ವೇದ ವೇಧಿಸಲರಿಯದೆ ಕೆಟ್ಟವು
ಪುರಾಣ ಪೂರೈಸರಿಯದೆ ಕೆಟ್ಟವು
ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು
ಹಿರಿಯರು ತಮ್ಮ ತಾವರಿಯದೆ ಕೆಟ್ಟರು
ತಮ್ಮ ಬುದ್ಧಿ ತಮ್ಮನೆ ತಿಂದಿತ್ತು ನಿಮ್ಮನೆತ್ತ ಬಲ್ಲರು ಗುಹೇಶ್ವರ.[13]

ಅಲ್ಲಮ ಪ್ರಭು

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ, ನೋಡಯ್ಯಾ.
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ.[14]

ಬಸವಣ್ಣ

...ವೇದವಿಜ್ಞಾನವೆಂದುದಾಗಿ – ತತ್ತ್ವಮಸಿ ವಾಕ್ಯಂಗಳೆಲ್ಲವೂ ಹುಸಿಯಾಗಿ ಹೋದವು

ಸಚ್ಚಿದಾನಂದವೆಂದುದಾಗಿ– ದ್ವೈತಾದ್ವೈತಿಗಳೆಲ್ಲ ಸಂಹಾರವಾಗಿ ಹೋದರು
ಬಂದೂ ಬಾರದ ನಿಂದ ನಿರಾಳ ಗುಹೇಶ್ವರ'.[15]

ಅಲ್ಲಮ ಪ್ರಭು

ವೇದವನೋದುವ ಅಣ್ಣಗಳು ನೀವು ಕೇಳಿರೊ!
ವೇದ ವೇದಿಸಲಿಲ್ಲ ಶಾಸ್ತ್ರ ಸಾಧಿಸಲಿಲ್ಲ;
ಪುರಾಣ ಪೂರೈಸಲಿಲ್ಲ, ಆಗಮಕ್ಕೆ ಆದಿಯಿಲ್ಲ.
ಇದು ಕಾರಣ–
ಆದ್ಯರಲ್ಲ, ವೇದ್ಯರಲ್ಲ, ಸಾಧ್ಯರಲ್ಲ
ಬರಿಯ ಹಿರಿಯರು ನೋಡಾ, ಕೂಡಲಚೆನ್ನಸಂಗಮದೇವಾ.[16]

ಚೆನ್ನಬಸವಣ್ಣ

ಮೇಲ್ಕಾಣಿಸಿದ ವಚನಗಳನ್ನು ಗಮನಿಸಿದಾಗ ವಚನಕಾರರು ಪೂರ್ವಜ್ಞಾನವನ್ನೆಲ್ಲ ನಿರಾಕರಿಸುತ್ತಿದ್ದಾರೆ ಎಂಬುದು ಸ್ಪಷ್ಟ. ವೇದ, ಶಾಸ್ತ್ರ, ಪುರಾಣ, ಆಗಮ ಇವುಗಳಿಂದ ಒದಗಿ ಬರುವ ತಿಳುವಳಿಕೆಯನ್ನು ಪರೀಕ್ಷೆಗೊಳಪಡಿಸದೆ ಒಪ್ಪಬಾರದು ಎನ್ನುತ್ತಿದ್ದಾರೆ ಎನಿಸುತ್ತದೆ. ಏಕೆಂದರೆ ಅನೇಕ ವಚನಕಾರರು ತಮ್ಮ ವಚನಗಳಲ್ಲಿ ಆದ್ಯರನ್ನು, ತಮಗಿಂತ ಹಿರಿಯರಾದ ಶಿವಭಕ್ತರನ್ನು, ಪುರಾತನರಾದ ಹಿರಿಯರನ್ನು ಅವರ ಕ್ರಿಯಾಚರಣೆಗಳನ್ನು ಅನುಭಾವಿಕತೆ ನೆಲೆಗಳನ್ನು ಸ್ಮರಿಸುತ್ತಾರೆ. ಅಂತಹ ಸ್ಮರಣೆಗಳು ಅಂಧಭಕ್ತಿಯಿಂದ ಮಾಡಿದುದಲ್ಲ, ವಿಚಾರ ಪುರಸ್ಸರವಾಗಿ ಮಾತ್ರ ಮಾನ್ಯ ಮಾಡಿದವುಗಳು. ವೇದ, ಶಾಸ್ತ್ರ, ಪುರಾಣ, ಶ್ರುತಿ, ಸ್ಮೃತಿ, ಆಗಮಗಳನ್ನು ಕಣ್ಮುಚ್ಚಿಕೊಂಡು ಪಾಲಿಸಬೇಕೆಂಬ ವಿಧಿಯನ್ನು ನಿರಾಕರಿಸುತ್ತಿದ್ದಾರೆ. ವೇದ ಪ್ರಮಾಣವೇ ಆದರೂ ಸರಿ ಅನುಭವ ಪ್ರಮಾಣವಾಗದ ಹೊರತು ಅದಕ್ಕೆ ಗತ್ಯಂತರವಿಲ್ಲ.

ಉಪಮಾನ ಪ್ರಮಾಣ: ಮೊದಲು ನೋಡಿದ ವಸ್ತುವಿಗೆ ಸದೃಶವಾದ ಬೇರೊಂದು ವಸ್ತುವನ್ನು ನೋಡಿದಾಗ ನೆನಪಾದ ವಸ್ತುವಿನ ಸಾದೃಶ್ಯಜ್ಞಾನ ಉಂಟಾದರೆ ಉಪಮಾನ ಪ್ರಮಾಣವೆಂದು ಮೇಲೆ ಹೇಳಿದೆವಷ್ಟೇ. ಕಾಡಿನಲ್ಲಿ ಕಂಡ ಗವಯ ಎಂಬ ಪ್ರಾಣಿಯನ್ನು ನೋಡಿದ ಕೂಡಲೇ ಊರಿನಲ್ಲಿ ಈ ಮೊದಲೇ ನೋಡಿದ್ದ ಹಸುವಿನ ಸಾದೃಶ್ಯ ನೆನಪು ಬಂದು ಗವಯ ಎಂಬುದು ಹಸುವಿನಂತೆ ಇರುವ ಪ್ರಾಣಿ ಎಂಬ ಅರಿವು ಒದಗಿ ಬರುವುದೇ ಉಪಮಾನ ಜ್ಞಾನ. ವಚನಕಾರರು ಮೂಲಭೂತವಾಗಿ ಅನುಭಾವಿಗಳು, ದಾರ್ಶನಿಕರು. ಅವರ ಅನುಭಾವಿಕ ನೆಲೆಯ ಚಿಂತನೆಗಳನ್ನು ಅಭಿವ್ಯಕ್ತಿಸುವುದಕ್ಕೆ ಉಪಮಾನದ ಸಾಧನಗಳನ್ನು ಬಳಸಿಕೊಳ್ಳುತ್ತಾರೆ. ಅಮೂರ್ತವಾದ ಅಲೌಕಿಕ ನೆಲೆಯ ವಸ್ತು ಸಂಗತಿಗಳ ವಿವರಣೆಗೆ ಉಪಮಾನಗಳನ್ನು ಅನಿವಾರ್ಯವೆಂಬಂತೆ ಬಳಸಿಕೊಂಡಿದ್ದಾರೆ. ಅಂತಹ ಕೆಲವು ಮಾದರಿಗಳನ್ನು ಗಮನಿಸಬಹುದು.

ನೆಲದ ಮರೆಯ ನಿಧಾನದಂತೆ

ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಮರದ ಮರೆಯ ತೇಜದಂತೆ
ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲವನರಿಯಬಾರದು.[17]

ಅಕ್ಕಮಹಾದೇವಿ.

ನೀರೊಳಗಣ ನೆಯ್ದಲು ತಾವರೆಯಂತೆ,
ಅದಾರಿಗೆ ಸುಖ ಅದಾರಿಗೆ ದುಃಖವೆಂಬುದ ಆರೈದಲ್ಲಿ,
ಆ ಉಭಯವು ನೀರಿನ
ಆರೈಕೆಯಿಂದ ಲೇಸೆಂದನಂಬಿಗ ಚೌಡಯ್ಯ.[18]

ಅಂಬಿಗರ ಚೌಡಯ್ಯ.

ಹೊಯ್ದಿದ ಹರೆಗೆ ಕುಣಿದಾಡುವರೆಲ್ಲಾ.
ಹಾಡಿದ ಗೀತಕ್ಕೆ ತಲೆದೂಗುವರೆಲ್ಲಾ.
ಪಂಜರದೊಳಗಣ ಅರಗಿಳಿಯಂತೆ, ಅದು ಆಡುವದು, ಹಾಡುವದು.
ಸಕಳೇಶ್ವರದೇವರಲ್ಲಿ,
ಅಭ್ಯಾಸಕ್ಕೆ, ಮಜ್ಜನಕ್ಕೆ ಎರೆವರೆಲ್ಲಾ ಭಕ್ತರೆ?[19]

ಸಕಳೇಶ ಮಾದರಸ

ಹುಟ್ಟಿದ ಮಗನ ರಚನೆ ಹುಟ್ಟಲಿಕ್ಕೆ ಯೋಗ್ಯವಾದಂತೆ
ಹುಟ್ಟಿದ ಮಾಯೆ ಬೆಟ್ಟ ಜನ ಅರಿವ ಪರಿಯಂತೆ
ನೀನಿಪ್ಪೆ ಜೀವಭಾವದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನಾ[20]

ಸಿದ್ದರಾಮೇಶ್ವರ

ಆದರೆ ಇಂತಹ ಉಪಮಾನ ಪ್ರಮಾಣಗಳಿಗೂ ಮಿತಿಗಳಿರುವುದನ್ನು ಅವರು ಅರಿತವರಾಗಿದ್ದರು.

ಉಪಮೆ ಉಪಮಿಸಲರಿಯದೆ ಉಪಮಾತೀತನೆನುತಿದ್ದಿತ್ತು
ಅರಿವು ಅರಿವಿನ ಮರೆಯಲಿದ್ದುದನರಿಯಲರಿಯದೆ–
ಅರಿವು ಪರಾಪರವೆನುತಿದ್ದಿತ್ತು! ಧ್ಯಾನಧ್ಯಾನಿಸಲರಿಯದೆ
ಧ್ಯಾನರೂಪಾತೀತನೆಂದು ತದ್ಧ್ಯಾನಗೊಂಡಿತ್ತು!
ಜ್ಞಾತೃ ಜ್ಞಾನ ಜ್ಞೇಯಕ್ಕೆ ಇನ್ನಾವ ಜ್ಞಾನವೋ?...[21]

ಅಲ್ಲಮ ಪ್ರಭು

ವಚನ ಎಂಬ ಪದಕ್ಕೆ ಮಾತು, ಭಾಷೆ, ಪ್ರಮಾಣ ಎಂಬ ಅರ್ಥಗಳೂ ಇವೆ. ವಚನಗಳೇ ಪ್ರಮಾಣವೆಂದಾದ ಮೇಲೆ ಅವು ಪ್ರಮಾಣವನ್ನು ಪುರಸ್ಕರಿಸುತ್ತವೆಯೆಂದು ತಿಳಿದರೆ ಆ ತಿಳುವಳಿಕೆ ಸರಿಯಾದುದಲ್ಲ. ನಡೆ–ನುಡಿ, ಆಚಾರ–ವಿಚಾರ, ಅರಿವು–ಕ್ರಿಯೆಗಳಲ್ಲಿನ ಎರಡಿಲ್ಲದ ಏಕತೆಯನ್ನು ಅವು ಪ್ರತಿಪಾದಿಸುತ್ತವೆಯಾದ್ದರಿಂದ ಆ

ಅರ್ಥದಲ್ಲಿ ವಚನಗಳನ್ನು ಪ್ರಮಾಣವೆಂದು ವ್ಯಾಖ್ಯಾನಿಸಲಾಗಿದೆ. ವಚನಗಳಾಗಲೀ, ಅವನ್ನು ಬರೆದ ವಚನಕಾರರಾಗಲೀ ಪ್ರಮಾಣಗಳನ್ನು ನಿರಾಕರಿಸಿದವರಾಗಿದ್ದಾರೆ. ಅವರ ನಿರಾಕರಣೆಗೆ ಕಾರಣವೇನಿರಬೇಕೆಂದು ಶೋಧಿಸಹೊರಟರೆ ವಸ್ತುಪ್ರಪಂಚವನ್ನು ಕುರಿತ ಅವರ ಧೋರಣೆಯೇ ಕಾರಣವೆನಿಸುತ್ತದೆ. ಅವರ ದೃಷ್ಟಿಯಲ್ಲಿ ಪ್ರಪಂಚ ಎನ್ನುವುದು ಈಗಾಗಲೆ ಇರುವ ಸಿದ್ಧವಸ್ತುವಲ್ಲ. ಅದು ಸದಾ ಆಗುತ್ತಲೇ ಇರುವ ವಿದ್ಯಮಾನ. ಹೀಗೆ ಚಲನಶೀಲವಾದ ಲೋಕವಸ್ತುವನ್ನು ಸಿದ್ಧ ನೆಲೆಯ ಪ್ರಮಾಣಗಳಿಂದ ಗ್ರಹಿಸಿಕೊಳ್ಳುವುದು ಸಾಧ್ಯವಿಲ್ಲ. ನಿರಂತರವಾಗಿ ಹರಿಯುತ್ತಿರುವ ಈ ಲೋಕ ಪ್ರವಾಹವನ್ನು ಅದರ ಆಗುವಿಕೆಯ ಸ್ಥಿತಿಯಲ್ಲಿ ಅರಿಯುವುದಕ್ಕೆ ಪೂರ್ವ ನಿರ್ಧರಿತ ಸಾಧನಗಳು ನೆರವಾಗಲಾರವು ಎಂಬ ತಿಳುವಳಿಕೆ ಅವರದಾಗಿತ್ತು. ಆದ್ದರಿಂದ ವಚನಕಾರರು ಎಲ್ಲ ಬಗೆಯ ರಚನೆಗಳನ್ನು, ಪ್ರಮಾಣಗಳನ್ನು ಒಡೆಯುತ್ತಾರೆ, ನಿರಚನೆಗೊಳಿಸಿ ನೋಡುತ್ತಾರೆ. ರಚನೆ–ನಿರಚನೆಯ ಪ್ರಕ್ರಿಯೆಯ ದಾರಿಯಿಂದ ಲೋಕವಸ್ತುವನ್ನು ಅರಿಯಲು ತೊಡಗಬೇಕು ಎಂಬ ತಿಳುವಳಿಕೆಯೇ ಅವರ ಪ್ರಮಾಣ ನಿರಾಕರಣೆಗೆ ಮುಖ್ಯ ಕಾರಣ.

ವಚನಕಾರರು ಎಲ್ಲ ಬಗೆಯ ಪ್ರಮಾಣಗಳನ್ನು ನಿರಾಕರಿಸುತ್ತಲೇ ಹೊಸ ಬಗೆಯ ಪ್ರಮಾಣಗಳನ್ನು ಆಹ್ವಾನ ಮಾಡಿಕೊಳ್ಳುವ, ಹಾಗೆ ಮಾಡಿಕೊಂಡ ಪ್ರಮಾಣಗಳನ್ನು ಕುಶಲತೆಯಿಂದ ವಿಸರ್ಜಿಸುವ ನಿಸರ್ಗನ್ಯಾಯವನ್ನು ಬಲ್ಲರು. ಅವರ ದಾರ್ಶನಿಕ ಪ್ರಭೆಯಿಂದ ಕಟ್ಟಲ್ಪಟ್ಟ ಷಟ್ಸ್ಥಲ ಮಾರ್ಗ, ಅಷ್ಟಾವರಣಗಳು, ಪಂಚಾಚಾರಗಳು ಹೊಸಬಗೆಯ ಪ್ರಮಾಣಗಳೇ ಆಗಿವೆ. ಅವಕ್ಕೆ ಜಡತ್ವವನ್ನಾಗಲೀ, ಸ್ಥಿರತ್ವವನ್ನಾಗಲೀ ಅವರು ಕಲ್ಪಿಸುವುದಿಲ್ಲ. ಚಲನಶೀಲತೆಯ ಗುಣವಿರುವುದರಿಂದಲೇ ಷಟ್ಸ್ಥಲ ಮಾರ್ಗವು ಸಾಧಕ ಜೀವನದ ಸೋಪಾನವಾಗುತ್ತದೆ. ಷಟ್ಸ್ಥಲ ಮಾರ್ಗ ಎನ್ನುವುದು ಅವಸ್ಥೆಯಲ್ಲ, ಸಾಧಕ ಜೀವನದ ವಿಕಾಸದ ಮೆಟ್ಟಿಲುಗಳು. ಲಿಂಗವೆಂಬುದು ಒಂದು ಪ್ರಮಾಣ; ಇಷ್ಟಲಿಂಗ, ಭಾವಲಿಂಗ, ಪ್ರಾಣಲಿಂಗ ಹೀಗೆ ಏನೆಲ್ಲ ಆಗುತ್ತಾ ಹೋಗುವ ಬೆಳವಣಿಗೆಯಿದೆ. ಗುರು ಎಂಬ ಪ್ರಮಾಣವೂ ಅಷ್ಟೇ ಅದು ಜಡವಾದುದಲ್ಲ.

ಗುರುವಾದಡೂ ಕಾಯಕದಿಂದವೆ ಜೀವನ್ಮುಕ್ತಿ.
ಲಿಂಗವಾದಡೂ ಕಾಯಕದಿಂದವೆ ವೇಷದ ಪಾಶ ಹರಿವುದು.
ಗುರುವಾದಡೂ ಚರಸೇವೆಯ ಮಾಡಬೇಕು.
ಲಿಂಗವಾದಡೂ ಚರಸೇವೆಯ ಮಾಡಬೇಕು.
ಜಂಗಮವಾದಡೂ ಚರಸೇವೆಯ ಮಾಡಬೇಕು
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು[22]

ನುಲಿಯ ಚಂದಯ್ಯ

ಗುರುಶಿಷ್ಯ ಸಂಬಂಧವನರಸಲೆಂದು ಹೋದರೆ
ತಾನೆ ಗುರುವಾದ, ತಾನೆ ಶಿಷ್ಯನಾದ, ತಾನೆ ಲಿಂಗವಾದ.

ಗುಹೇಶ್ವರ, ನಿಮ್ಮ ಶರಣನ ಕಾಯದ ಕೈಯಲ್ಲಿ ಲಿಂಗವ ಕೊಟ್ಟರೆ
ಭಾವ ಬತ್ತಲೆಯಾಯಿತ್ತು.[23]

ಅಲ್ಲಮ ಪ್ರಭು

ಹೀಗೆ ಹಳೆಯ ಪ್ರಮಾಣಗಳನ್ನು ಕೆಡುವುತ್ತಾ, ಹೊಸ ಪ್ರಮಾಣಗಳನ್ನು ಸ್ಥಾಪಿಸುತ್ತಾ, ಮತ್ತೆ ಅವುಗಳನ್ನು ವಿಸರ್ಜಿಸುತ್ತಾ ಹೋಗುವ ವಚನಕಾರರು ನಡೆಗೂ ಒಂದು ಮಧ್ಯಬಿಂದು ಇರುವಂತೆ ತೋರುತ್ತದೆ.

ವೇದ ಪ್ರಮಾಣಲ್ಲ, ಶಾಸ್ತ್ರ ಪ್ರಮಾಣಲ್ಲ
ಶಬ್ದ ಪ್ರಮಾಣಲ್ಲ, ಕಾಣಿಭೋ ಲಿಂಗಕ್ಕೆ!
ಅಂಗಸಂಗದ ಮಧ್ಯದಲ್ಲಿದ್ದುದ
ಬೈಯಿಟ್ಟು ಬಳಸಿದ–ಗುಹೇಶ್ವರ, ನಿಮ್ಮ ಶರಣ.[24]

ಅಲ್ಲಮ ಪ್ರಭು

ಅಂಗಸಂಗದ ಮಧ್ಯದಲ್ಲಿ ಬೈಯಿಟ್ಟು ಬಳಸಿದ ಲಿಂಗವೇ ನಿರಾಕರಿಸಲಾಗದ ಪ್ರಮಾಣ. ಪ್ರತಿಯೊಂದು ದಾರ್ಶನಿಕ ಪಂಥವು ತನ್ನ ಅಸ್ಮಿತೆಗಾಗಿ ಇಂಥ ಪ್ರಮಾಣಗಳನ್ನು ಅನಿವಾರ್ಯವೆಂಬಂತೆ ಉಳಿಸಿಕೊಳ್ಳುತ್ತವೆ. ವಚನಕಾರರಿಗೂ ಇಂತಹ ಅನಿವಾರ್ಯತೆ ಒದಗಿ ಬಂದಿರಬೇಕು ಎನಿಸುತ್ತದೆ.

ಅಗಮ್ಯ ಅಗೋಚರ ಅಪ್ರಮಾಣಲಿಂಗದಲ್ಲಿ
ಲಿಂಗಸಂಗಿಯಾದ ಮಹಾಶರಣರ ಪಾದವ ಹಿಡಿದು
ಆನು ಬದುಕಿದೆನಯ್ಯ ಝೇಂಕಾರ ನಿಜಲಿಂಗಪ್ರಭುವೆ.[25]

ಜಕ್ಕಣಯ್ಯ

...ಅಪ್ರಮಾಣ–ಅಗೋಚರವಾದ ಲಿಂಗದಲ್ಲಿ ಸಂಗವ ಬಲ್ಲಾತನೆ
ಸದಾಚಾರಸದ್ಭಕ್ತನು!...[26]

ಅಂಬಿಗರ ಚೌಡಯ್ಯ

ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ.
ಸ್ವಯವೆಂಬುದು ಪ್ರಮಾಣ, ಪರವೆಂಬುದು ಪ್ರಮಾಣ.
ಪ್ರಮಾಣವೆಂಬುದು ಪ್ರಮಾಣ,
ಗುಹೇಶ್ವರನೆಂಬುದು ಅಪ್ರಮಾಣ.[27]

ಅಲ್ಲಮಪ್ರಭು

ವರ್ಮವ ನುಡಿವರೆಂದು ಸಮನಿಸಲಾರೆ.
ತಮ್ಮಾ ನಿಮ್ಮನೆತ್ತಿಕೊಂಡು ನೊಂದೆ,
ತಮ್ಮಾ ನಿಮ್ಮನಿಳುಹಲಾರದೆ ನೊಂದೆ.
ತಮ್ಮಾ ಅಗಮ್ಯ ನಾಚಯ್ಯಪ್ರಿಯ ಚೆನ್ನರಾಮೇಶ್ವರನ ನೆಮ್ಮಿ
ತಮ್ಮನನಿಳುಹಿದೆ.[28]

ಅನಾಮಿಕ ನಾಚಯ್ಯ.

ನಡುನೀರ ಮಧ್ಯದಲ್ಲಿ ಅಗಮ್ಯದ ಜ್ಯೋತಿ ಉರಿವುತ್ತಿದೆ.
ಅಗಲದೆ ನೋಡಲಿಕೆ ನೀರಿನ ಮೇಲೆ ಉರಿವುತ್ತಿಪ್ಪುದು.
ಹೊದ್ದಿ ನೋಡಲಿಕ್ಕೆ ನೀರಿನೊಳಗೆ ಮುಳುಗಿ ಉರಿವುತ್ತಿಪ್ಪುದು.
ಅದು ಜ್ಯೋತಿಯ ಗುಣವೋ, ತನ್ನ ಭ್ರಾಂತಿನ ಗುಣವೋ?
ಎಂಬುದ ತಿಳಿದಡೆ, ನಿಃಕಳಂಕ ಮಲ್ಲಿಕಾರ್ಜುನಲಿಂಗವ ಬಲ್ಲವ.[29]

ಮೋಳಿಗೆ ಮಾರಯ್ಯ.

ಪರಶಿವ, ಪರತತ್ವಗಳನ್ನು ಅಗೋಚರ, ಅಗಮ್ಯ, ಅಪ್ರಮಾಣ ಎಂದು ವಿವರಿಸಿಕೊಳ್ಳುವ ಧೋರಣೆ ಎಲ್ಲ ವಚನಕಾರರಲ್ಲಿಯೂ ಕಂಡುಬರುವ ಒಂದು ಸಮಾನಾಂಶ. ಇದಕ್ಕೆ ಯಾವ ವಚನಕಾರನು ಹೊರತಾಗಿಲ್ಲ ದೃಗ್ಗೋಚರವಾದ ವಸ್ತುಪ್ರಪಂಚವನ್ನು ಒಂದು ಹಂತದವರೆಗೆ ಅಳತೆಯ ಸಾಧನಗಳಿಂದ ಅಳೆಯಬಹುದಾದರೂ ವಾಙ್ಮನಕ್ಕತೀತವಾದ ಸಂಗತಿಗಳನ್ನು ಪ್ರಮಾಣಗಳ ಬಲದಿಂದ ಅರಿಯಲಾಗದ ಅಸಾಧ್ಯತೆಯನ್ನು ತಮ್ಮ ವಚನಾಂಕಿತಗಳ ವಿವರಣೆಯಲ್ಲಿ ಮಂಡಿಸುತ್ತಾರೆ.

ಕೊನೆ ಟಿಪ್ಪಣಿಗಳು:

1. ನಟರಾಜ ಬೂದಾಳು, ಕನ್ನಡ ಕಾವ್ಯ ಮೀಮಾಂಸೆ (ಪು. 86–87).
2. ಅದೇ, ಪು. 88.
3. ಅದೇ, ಪು. 88.
4. ಅದೇ, ಪು. 89.
5. vachanasanchaya.net, ಸಮಗ್ರ ವಚನ ಸಂಪುಟ: 1, ವಚನದ ಸಂಖ್ಯೆ: 126.
6. ಅಲ್ಲಮಪ್ರಭು ವಚನ ಸಂಪುಟ–2, ಸಂ. ಬಿ. ಫ್ಹಿ. ಮಲ್ಲಾಪೂರ, ಪು. 444.
7. ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ಪು. 176.
8. ಅದೇ, ಪು. 124.
9. vachanasanchaya.net, ಸಮಗ್ರ ವಚನ ಸಂಪುಟ: 1, ವಚನದ ಸಂಖ್ಯೆ: 842.
10. vachanasanchaya.net, ಸಮಗ್ರ ವಚನ ಸಂಪುಟ: 2, ವಚನದ ಸಂಖ್ಯೆ: 465.
11. ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ಪು. 159.
12. vachanasanchaya.net, ಸಮಗ್ರ ವಚನ ಸಂಪುಟ: 5, ವಚನದ ಸಂಖ್ಯೆ: 372.
13. ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ಪು. 73.
14. vachanasanchaya.net, ಸಮಗ್ರ ವಚನ ಸಂಪುಟ: 1, ವಚನದ ಸಂಖ್ಯೆ: 717.
15. ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ಪು. 142.
16. vachanasanchaya.net, ಸಮಗ್ರ ವಚನ ಸಂಪುಟ: 3, ವಚನದ ಸಂಖ್ಯೆ: 1568.
17. vachanasanchaya.net, ಸಮಗ್ರ ವಚನ ಸಂಪುಟ: 5, ವಚನದ ಸಂಖ್ಯೆ: 268.
18. vachanasanchaya.net, ಸಮಗ್ರ ವಚನ ಸಂಪುಟ: 6, ವಚನದ ಸಂಖ್ಯೆ: 179.

19. vachanasanchaya.net, ಸಮಗ್ರ ವಚನ ಸಂಪುಟ: 9, ವಚನದ ಸಂಖ್ಯೆ: 502.
20. vachanasanchaya.net, ಸಮಗ್ರ ವಚನ ಸಂಪುಟ: 4, ವಚನದ ಸಂಖ್ಯೆ: 1969.
21. ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ಪು. 142.
22. vachanasanchaya.net, ಸಮಗ್ರ ವಚನ ಸಂಪುಟ: 7, ವಚನದ ಸಂಖ್ಯೆ: 1303.
23. ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ಪು. 16.
24. ಅದೇ, ಪು. 62.
25. vachanasanchaya.net, ಸಮಗ್ರ ವಚನ ಸಂಪುಟ: 10, ವಚನದ ಸಂಖ್ಯೆ: 1552.
26. vachanasanchaya.net, ಸಮಗ್ರ ವಚನ ಸಂಪುಟ: 6, ವಚನದ ಸಂಖ್ಯೆ: 63.
27. vachanasanchaya.net, ಸಮಗ್ರ ವಚನ ಸಂಪುಟ: 2, ವಚನದ ಸಂಖ್ಯೆ: 1292.
28. vachanasanchaya.net, ಸಮಗ್ರ ವಚನ ಸಂಪುಟ: 6, ವಚನದ ಸಂಖ್ಯೆ: 311.
29. vachanasanchaya.net, ಸಮಗ್ರ ವಚನ ಸಂಪುಟ: 8, ವಚನದ ಸಂಖ್ಯೆ: 1842.